**<u>ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ, ನ್ಯಾಯಾಲಯ, ಕುಣಿಗಲ್.</u>**

ಸಿ.ಸಿ.ನಂ. 36/2019

ಸಿ.ಡಬ್ಲ್ಯೂ -01

ಪಿ.ಡಬ್ಲ್ಯೂ-01

ಸಾಕ್ಷಿದಾರನ ಹೆಸರುಃ- ಬೆಟ್ಟಯ್ಯ

ತಂದೆಯ ಹೆಸರು ಹುಂಟಯ್ಯ

ವಯಸ್ಸು 69 ವರ್ಷ

ಉದ್ಯೋಗ ವ್ಯವಸಾಯ

ವಾಸ ಅರಳೆಮರದದೊಡ್ಡಿ

**<u>ಸಾಕ್ಷಿಗೆ ದಿಃ 05.02.2025 ರಂದು ಪ್ರಮಾಣ ವಚನ ಬೋದಿಸಲಾಯಿತು.</u>**

**<u>ಮುಖ್ಯ ವಿಚಾರಣೆಃ- ಮಾನ್ಯ ಸ.ಸ.ಅ ರವರಿಂದ.</u>**

ಕೆಂಪನಹಳ್ಳಿ ಗ್ರಾಮದ ಸರ್ವೆ ನಂ 50/7 ಮತ್ತು 50/9 ಅನ್ನು ನಮ್ಮ ತಂದೆಯ ಹೆಸರಲ್ಲಿದ್ದು ಅದನ್ನು ನಾವೇ ಉಳುಮೆ ಮಾಡುತ್ತಿದ್ದು ಸದರಿ ಜಮೀನು ನಾನೇ ಕೊಂಡುಕೊಂಡಿರುತ್ತೇನೆ. ನಾನು ಖಾಸಗಿ ಶಾಲೆಯಲ್ಲಿ ನೌಕರನಾಗಿದ್ದು, ನೌಕರರು ಜಮೀನನ್ನು ಕೊಂಡುಕೊಳ್ಳಬಾರದೆಂದು ನನ್ನ ತಂದೆಯ ಹೆಸರಿಗೆ ಖಾತೆ ಮಾಡಿಸಿರುತ್ತೇನೆ. ಸದರಿ ಜಮೀನನಲ್ಲಿ ರಾಗಿ ಬೆಳೆ ಬೆಳೆದಿದ್ದು ಕಟಾವು ಮಾಡಿದ ರಾಗಿ ಬೆಳೆಯನ್ನು ಮೇದೆ ಹಾಕಲು ದಿಃ 12.01.2019 ರಲ್ಲಿ 12.30 ಗಂಟೆಗೆ ಹೋಗಿದ್ದು ಆಗ ಆರೋಪಿ 1 ಮತ್ತು 3 ಬಂದು ನನ್ನ ಮೇಲೆ ಗಲಾಟೆ ಮಾಡುತ್ತಿದ್ದರು. ಆಗ ಸದರಿ ಗುಂಪಿನಲ್ಲಿದ್ದ ಆರೋಪಿ 4 ನನ್ನ ಎಡಕಪಾಳಕ್ಕೆ ಹೊಡೆದಿದ್ದು ಹಲ್ಲುಗಳು ಅಲುಗಾಡುವಂತೆ ಮಾಡಿರುತ್ತಾರೆ. ಆಗ ಚಾಸಾ 2 ನನ್ನನ್ನು ಬಿಡಿಸಿಕೊಳ್ಳಲು ಬಂದಿದ್ದು ಆರೋಪಿ 1 ಮತ್ತು 3 ಬಂದು ನನ್ನ ಹೆಂಡತಿಯ ಸೀರೆಯನ್ನು ಹಿಡಿದು ಎಳೆದಾಡಿ ಅವರ ಧರಿಸಿದ್ದ ಜಾಕೇಟ ಅನ್ನು ಹರಿದುಹಾಕಿರುತ್ತಾರೆ. ನಂತರ ಆರೋಪಿ 5 ಮತ್ತು 6 ನನ್ನನು ಕೆಳಗೆ ಕೆಡವಿ ಚಪ್ಪಲಿ ಕಾಲಿನಿಂದ ತುಳಿದಿರುತ್ತಾರೆ. ಗಲಾಟೆ ಸಮಯದಲ್ಲಿ ನಮ್ಮ ಗ್ರಾಮದ ಚಾಸಾ 4 ಮತ್ತು 5 ಅವರು ಬಂದು ಜಗಳವನ್ನು ಬಿಡಿಸಿರುತ್ತಾರೆ.

ನಾನು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದು ಆ ದಿನ ದೂರನ್ನು ನೀಡಿರುವುದಿಲ್ಲ. ದಿಃ 13.01.2019 ರಂದು ಮದ್ಯಾಹ್ನ 2.30 ಗಂಟೆ ಸಮಯದಲ್ಲಿ ಪೋ ಠಾಣೆಗೆ ದೂರು ನೀಡಿರುತ್ತೇನೆ. ದೂರಿಗೆ ನನ್ನ ಸಹಿ ಇರುತ್ತದೆ. ಅದನ್ನು ನಿ.ಪಿ 1 ಎಂದು ಸಹಿಯನ್ನು ನಿ.ಪಿ 1(ಎ) ಎಂದು ಗುರುತಿಸಲಾಯಿತು. ಈ ದಿನ ನ್ಯಾಯಾಲಯದಲ್ಲಿರುವ ಮು. ಮಾ. ಗಳನ್ನು ಚಾಸಾ 2 ಗಲಾಟೆ ಆದ ಸಮಯದಲ್ಲಿ ಧರಿಸಿದ್ದರು ಅವುಗಳನ್ನು ಗುರುತಿಸುತ್ತೇನೆ. ಅವುಗಳನ್ನು ಮು. ಮಾ. 1 ಮತ್ತು 2 ಎಂದು ಗುರುತಿಸಲಾಯಿತು.

ನಾನು ಪೋಲಿಸರ ಮುಂದೆ ಮರು ಹೇಳಿಕೆ ನೀಡಿರುವುದಿಲ್ಲ.

**(ಈ ಹಂತದಲ್ಲಿ ಮಾನ್ಯ ಸ.ಸ.ಅ ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲಿಗಾಗಿ ನ್ಯಾಯಾಲಯದ ಅನುಮತಿಯನ್ನು ಕೋರಿರುತ್ತಾರೆ. ಅನುಮತಿಸಲಾಗಿದೆ.)**

**ಪಾಟೀ ಸವಾಲುಃ- ಮಾನ್ಯ ಸ.ಸ.ಅ ರವರಿಂದ.**

ದಿಃ 05.02.2019 ರಂದು ನಾನು ಪೋ. ಠಾಣೆಗೆ ಬೇಟಿ ನೀಡಿ ನಾನು ನನ್ನ ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿ.ಪಿ 2 ಎಂದು ಗುರುತಿಸಲಾಯಿತು.

**ಪಾಟೀ ಸವಾಲಿಗೆ ವಕೀಲರು ಕಾಲಾವಕಾಶ ಕೋರಿದ್ದು ಕೋರಿಕೆ ಮೇರೆಗೆ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ.

ಸಹಿ/-

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.

ಕುಣಿಗಲ್.